ಇ) ಭೂರಹಿತರು ೬೬೭೮
ಹರಿಜನ ಗಿರಿಜನರು ೨೮೯೯
ಉಳಿದ ವರ್ಗ ೫೧೦೯

ಈ) ಬಗರ್ ಹುಕುಂ ಸಾಗುವಳಿಗಾರರು ೧೧೮, ಜನರು ವಿಸ್ತೀರ್ಣ-೬೩ ಎಕರೆ ೧೦ ಗುಂಟೆ

ಉ) ತಾರೀಖು ೧-೯-೭೭ ಮತ್ತು ೨೭-೩-೮೧ರ ಸರ್ಕಾರಿ ಆಜ್ಞೆ ಪ್ರಕಾರ ಅರ್ಹ ವ್ಯಕ್ತಿಗಳಿಗೆ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ವರದಿಯನ್ನೊಪ್ಪಿಸುವುದು

ಶ್ರೀ ವೀರಣ್ಣ (ಉಪಾಧ್ಯಕ್ಷರು).—ಖಾಸಗಿ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಯಿತು.

ನಿಯಮ ೩೩ಳಿರ ಮೇರೆಗೆ

ಬೆಂಗಳೂರು ಡೈರಿ ಹಾಲು ಕೆಟ್ಟುಹೋಗಿ ಉಂಟಾದ ನಷ್ಟದ ಬಗ್ಗೆ

ಶ್ರೀ ಯಡಿಯೂರಪ್ಪ.—ಅಧ್ಯಕ್ಷರೆ, ನಾನು ೩೩ಳಿರ ಕೆಳಗೆ ಒಂದು ನೋಟಿಸ್ ಕಳುಹಿಸಿದ್ದೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಈಗ ಉತ್ತರ ಕೊಡಬೇಕು.

ಶ್ರೀ ವಿಶ್ವನಾಥರೆಡ್ಡಿ (ಪಶುಸಂಗೋಪನಾ ಮಂತ್ರಿಗಳು) ಅಧ್ಯಕ್ಷರೆ, ಈಗ ನಾನು ಉತ್ತರ ಹೇಳುತ್ತೇನೆ.

ದಿನಾಂಕ ೧೯-೧-೧೯೮೪ಳಿರ ಶಾಸಕ ಶ್ರೀ ಯಡಿಯೂರಪ್ಪ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ.

ಕಳೆದ ರಾತ್ರಿ (೧೮-೧ ೧೯೮೪ಳಿ) ಬೆಂಗಳೂರು ಡೈರಿಯಲ್ಲಿ ೧.೫ ಲಕ್ಷ ಲೀಟರ್‌ಗಳಷ್ಟು ಹಾಲು ಕೆಟ್ಟು ಹೋಗಿ, ಚರಂಡಿಗೆ ಹಾಕಲಾಯಿತು ಹಾಗೂ ಇದರಿಂದ ೪ಲಕ್ಷ ರೂಪಾಯಿಗಳಷ್ಟು ನಷ್ಟ ವಾಗಿದೆ ಎಂಬುದು ಸತ್ಯಾಂಶ ವಿಚಾರವೆ?

ಶ್ರೀ ವಿಶ್ವನಾಥ ರೆಡ್ಡಿ.—ಎಂದಿನಂತೆ ದಿನಾಂಕ ೧೮-೧-೧೯೮೪ಳಿರ ಬೆಳಿಗ್ಗೆ ಮತ್ತು ಸಂಜೆ ಹಾಲು ಸರಬರಾಜು ಮಾಡಲು ಬೆಂಗಳೂರು ಡೈರಿ ಆಡಳಿತವು ಯೋಜಿಸಿತ್ತು. ಆಂತೆಯೇ, ಬೆಳಿಗ್ಗೆಯ ಬೇಡಿಕೆ ಯಾದ ೧.೫೦ ಲಕ್ಷ ಲೀಟರ್ ಹಾಲನ್ನು ಸ್ಯಾಚೇಟ್ (ಪ್ಲಾಸ್ಟಿಕ್ ಚೀಲ)ಗಳಲ್ಲಿ ತುಂಬಿ ವಿತರಣೆಗಾಗಿ ದಿನಾಂಕ ೧೭.೧.೮೪ ರಂದು ರಾತ್ರಿ ಸಿದ್ಧ ಮಾಡಲಾಯಿತು. ಆದರೂ ದಿನಾಂಕ ೧೮.೧.೮೪ರಂದು ಬೆಳಿಗಿನ ಜಾವ ೨ ಗಂಟೆಯಲ್ಲಿ ಸುಮಾರು ೨೦೦ ಜನರು ಡೈರಿಯ ಗೇಟಿನ ಬಳಿ ಸೇರಿ ಬಂದು, ಹಾಲು ರವಾನೆ ಯನ್ನು ತಡೆಯಲು ಆರಂಭ ಮಾಡಿದರು. ಆದುದ್ದರಿಂದ, ಡೈರಿ ತಾಣದಿಂದ ಹೊರಗೆ ವಾತಾವರಣವು ಹದಗೆಟ್ಟಿರುವ ಕಾರಣ, ಲಾರಿಗಳನ್ನು ರವಾನೆ ಮಾಡುವುದು ಸಾಧುವಾಗಿರಲಿಲ್ಲ, ಲಾರಿಗಳನ್ನು ನಡೆಸುವ ಕಂಟ್ರಾಕ್ಟರ್‌ಗಳು ಸಹ ಈ ಪರಿಸ್ಥಿತಿಯಲ್ಲಿ ಲಾರಿಗಳನ್ನು ಓಡಿಸಲು ನಿರಾಕರಿಸಿದರು. ಮಧ್ಯಾಹ್ನದ ಹಾಲು ಸರಬರಾಜಿಗೂ ಸಹ ಇದೇ ರೀತಿಯ ಪರಿಸ್ಥಿತಿ ಉಂಟಾಯಿತು. ಹೀಗಾಗಿ ೧೮.೧.೧೯೮೪ಳಿ ರಂದು ಬೆಳಿಗ್ಗೆ ಮತ್ತು ಸಾಯಂಕಾಲ ಎರಡೂ ವೇಳೆಯಲ್ಲಿ ನಗರದಲ್ಲಿ ಹಾಲನ್ನು ಸರಬರಾಜು ಮಾಡಲು ಆಗಲಿಲ್ಲ.

ಹಾಲಿರುವ ಸ್ಯಾಚೇಟುಗಳನ್ನು ಆರಂಭದಲ್ಲಿ ಶಿಥಿಲ ಉಗ್ರಾಣ (ಕೋಲ್ಡ್ ಸ್ಟೋರ್ಸ್)ನಲ್ಲಿ ಇಡಲಾಗಿತ್ತು. ಮತ್ತು ದಿನಾಂಕ ೧೮.೧.೮೪ಳಿರಂದು ಡೈರಿ ತಾಣದಲ್ಲಿ ಅಂದಾಜು ೨೦,೦೦೦ ಲೀಟರ್ ಗಳಷ್ಟು ಹಾಲನ್ನು ಗ್ರಾಹಕರಿಗೆ ವಿತರಣೆ ಮಾಡಲಾಯಿತು. ಇನ್ನುಳಿದ ಸ್ಯಾಚೇಟ್‌ಗಳನ್ನು ಹೊಡೆದು, ಹಾಲನ್ನು ಪುನರ್‌ಸಂಸ್ಕರಿಸಲಾಯಿತು. ಈ ರೀತಿಯಾಗಿ ಪುನಃ ಸಂಸ್ಕರಿಸಿದ ಹಾಲಿನಲ್ಲಿ